ಒ. ಎಸ್. ನಂ.17/2022

ಪಿಡಬ್ಲೂ-1

ದಿನಾಂಕಃ 12.08.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.

**ಪಾಟೀ ಸವಾಲು :- ಶ್ರೀ. ಪ್ರತಿವಾದಿ ಪರ ವಕೀಲರಿಂದಃ-**

ನನ್ನ ಗಂಡ ಮಾಡಿರುವ ವ್ಯವಹಾರಗಳ ಬಗ್ಗ ತಿಳಿದುಕೊಂಡಿರುತ್ತೇನೆ. ಪ್ರತಿವಾದಿ ಗಳ ಮೇಲೆ ಅ.ದಾ355/2018 ರಂತೆ ಹಣ ವಸೂಲಾತಿಗಾಗಿ ಇನ್ನೂಂದು ದಾವೆ ಹೂಡಿರುತ್ತೇನೆ ಎಂದರೆ ಸರಿ. ಇನ್ನೂ 4-5 ದಾವೆಗಳನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ. ಆಧಾರ ಪತ್ರ ಬರೆದುಕೊಟ್ಟಿರುವ ವಿಚಾರಗಳನ್ನು ತಿಳಿದುಕೊಂಡಿರುತ್ತೇನೆ. 3 ವರ್ಷಗಳ ಒಳಗೆ ಹಣ ಪಾವತಿಸಬೇಕೆಂದು ನಮೂದು ಇರುತ್ತದೆ ಎಂದರೆ ಸರಿ. 3 ವರ್ಷಗಳ ಒಗಳ ನೋಟೀಸ್ ಕೊಟ್ಟಿರುತ್ತೇವೆ. ನನಗೆ 3 ಜನ ಮಕ್ಕಳು ಅವರೆಂದರೆ ವಾದಿ 2, 3 ಮತ್ತು ಶಿವಣ್ಣ. ಈ ದಾವೆಯಲ್ಲಿ ಶಿವಣ್ಣ ಎಂಬುವವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಆಧಾರ ಪತ್ರ ಮಾಡಿಕೊಡುವ ಮೊದಲಿನ ವ್ಯವಹಾರ ಗೊತ್ತಿರುತ್ತದೆ. ಆಧಾರ ಪತ್ರ ಬರೆದುಕೊಡುವ ಮುಂಚೆ ಯಾವಾಗ ಸಾಲ ಕೇಳಿರುತ್ತಾರೆ ಎಂದರೆ ದಿನಾಂಕ ಗೊತ್ತಿಲ್ಲ. ನನ್ನ ಸಮಕ್ಷಮ ನನ್ನ ಗಂಡ ಪ್ರತಿವಾದಿ ಗಳಿಗೆ ಹಣ ಪಾವತಿಸಿರುತ್ತಾರೆ. ಸದರಿ ದಿನ ಪ್ರತಿವಾದಿಗಳನ್ನು ಹೊರತು ಪಡಿಸಿ ಬೇರೆ ಯಾರು ಇರಲಿಲ್ಲ. ಸದರಿ ಹಣವನ್ನು ತಾಲ್ಲೂಕು ಕಛೇರಿಯಲ್ಲಿ ಕೊಟ್ಟಿರುತ್ತೇನೆ. ನಿಪಿ 1 ರ ಮೇಲಿನ ದಿನಾಂಕ ಮತ್ತು ಅ.ದಾ ನಂ. 355/2018 ರಲ್ಲಿ ಹಾಜರುಪಡಸಿದ ಪ್ರನೋಟ್ ದಿನಾಂಕ ಒಂದೇ ಆಗಿರುತ್ತದೆ ಎಂದರೆ ಗೊತ್ತಿಲ್ಲ. ನನ್ನ ಗಂಡ ತೀರಿಹೋದ ನಂತರ ಪ್ರತಿವಾದಿ ಗಳಿಗೆ ನೋಟೀಸ್ ಕೊಡಲು ಅಭ್ಯಂತರ ಇತ್ತಾ ಎಂದರೆ ನಾನು ದುಃಖದಲ್ಲಿ ಇದ್ದೆ ಎಂದು ನುಡಿಯುತ್ತಾರೆ. ಸದರಿ ನೋಟೀಸ್ ನಲ್ಲಿ ನಿಮ್ಮ ಹಿರಿಯ ಮಗನನ್ನು ಸೇರಿಸಿಲ್ಲ ಎಂದರೆ ಸರಿ.

**ಮುಂದುವರೆದ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು, ನೀಡಲಾಯಿತು.**

(ತೆರೆದ ನ್ಯಾದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

2 ನೇ ಹೆಚ್ಚುವರಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಹೆಚ್.ಡಿ. ಕೋಟೆ